ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 18 ನೇ ಮಾರ್ಚ್, 2020

ಅಂಬೇಡ್ಕರ್ ಮತ್ತು ಇತರೆ ನಿಗಮದಿಂದ ಕೊಳವೆ ಬಾವಿಗಳ ಕೊರೆಸಿರುವ ಬಗ್ಗೆ

ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

1136 (1340) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ :-

(ಅ) ಅಂಬೇಡ್ಕರ್/ದೇವರಾಜ ಅರಸ್ ವಾಲ್ಮೀಕಿ ಅಲ್ಪಸಂಖ್ಯಾತರ /ವಿಶ್ವÀಕರ್ಮ/ತಾಂಡ/ಭೋವಿ ಜನಾಂಗ/ಪರಿಶಿಷ್ಟ ವರ್ಗ ಸೇರಿದಂತೆ ಇನ್ನಿತರೆ ಅಭಿವೃದ್ಧಿ ನಿಗಮಗಳಿಂದ 2019-20 ನೇ ಸಾಲಿಗೆ ರಾಜ್ಯದಲ್ಲಿರುವ ಆಯ್ಕೆಯಾದ ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಯಲು ನಿಗದಿಪಡಿಸಿದ ಗುರಿಯೆಷ್ಟು;

(ಆ) ನಿಗದಿಪಡಿಸಿದ್ದ ಗುರಿಯಲ್ಲಿ 2020ನೇ ಮಾರ್ಚ್ ಅಂತ್ಯಕ್ಕೆ ಎಷು ಕೊಳವೆ ಬಾವಿಗಳನ್ನು ಕೊರೆಸಲಾಗಿದೆ ; ಕೊರೆಸಲು ಬಾಕಿ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; ಸಂಪೂರ್ಣ ಮಾಹಿತಿಯನ್ನು ಜಿಲ್ಲಾವಾರು ನೀಡುವುದು ; ಮತ್ತು ಈ ಪ್ರಕ್ರಿಯೆಗೆÀ ಎಷ್ಟು ಹಣ ಖರ್ಚಾಗಿದೆ ;

(ಇ) ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ವಿವಿಧ ನಿಗಮಗಳಿಂದ ಕೊಳವೆ ಬಾವಿಗಳನ್ನು ಕೊರೆಯಲು ನಿಗದಿಪಡಿಸಲಾಗಿದ್ದ ಗುರಿ ಎಷ್ಟು ;

(ಈ) ಕೊರೆದಿರುವÀ ಕೊಳವೆ ಬಾವಿಗಳೆಷ್ಟು ; ಇನ್ನೂ ಕೊರೆಯಲು ಬಾಕಿ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಕೊರೆದಿರುವ ಕೊಳವೆ ಬಾವಿಗಳನ್ನು ವಿದ್ಯುದ್ದೀಕರಣ ಮತ್ತು ಪಂಪು ಮೋಟಾರ್ ಅಳವಡಿಕೆ ಮಾಡಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; ಇವುಗಳನ್ನು ಅಳವಡಿಸಲು ಬಾಕಿ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ಸಂಪೂರ್ಣ ಅಂಕಿ ಅಂಶ ಒದಗಿಸುವುದು)

(ಊ) ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಸಲು/ವಿದ್ಯುತ್ ಮೋಟಾರ್ ಒದಗಿಸಲು ಬಾಕಿ ಇರುವ ಎಲ್ಲಾ ಅರ್ಜಿದಾರರ ಕೋರಿಕೆಯನ್ನು ಎಷ್ಟು ದಿವಸದೊಳಗಾಗಿ ಪೂರ್ಣಗೊಳಿಸಲಾಗುವುದು ;

(ಋ) ಇದಕ್ಕಾಗಿ ತುಮಕೂರು ಜಿಲ್ಲೆಗೆ ಖರ್ಚಾಗಿರುವ ಹಣವೆಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)